ದಿನಾಂಕ 31-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಹೆಚ್. ವಕೀಲರಿಂದಃ</u>**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 2009 ರಲ್ಲಿ ನಾನು 10 ನೇ ತರಗತಿ ವಿದ್ಯಾಭ್ಯಾಸವನ್ನು ಸಂಪೂರ್ಣ ಮಾಡಿರುತ್ತೇನೆ. 1 ನೇ ವಾದಿಯು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನಾನು ಮತ್ತು 1 ನೇ ವಾದಿಯು ಹಸನಬಾದಿಯ ಪ್ರಾಥಮಿಕ ಶಾಲೆಯಲ್ಲಿ 1 ರಿಂದ 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇವೆ. 6 ಮತ್ತು 7 ನೇ ತರಗತಿಯನ್ನು 1 ನೇ ವಾದಿಯು ಬೈಚುವಳ್ಳಿಯಲ್ಲಿ ಕಲಿತಿರುತ್ತಾರೆ. 6 ರಿಂದ 10 ನೇ ತರಗತಿವರೆಗೆ ನಾನು ಬೈಚುವಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ.

2. ಹಸನಬಾದಿ ಗ್ರಾಮದಿಂದ ಬೈಚುವಳ್ಳಿ ಗ್ರಾಮಕ್ಕೆ 3 ಕಿ ಮೀ.ಗಳ ದೂರ ಇದೆ. ಹಸನಬಾದಿಯಿಂದ ಬೈಚುವಳ್ಳಿಗೆ ವಿದ್ಯಾಭ್ಯಾಸ ಮಾಡಲು ಬಸ್ಸಿನಲ್ಲಿ ಹೋಗುತ್ತಿದ್ದೆ. ನನ್ನ ತಾಯಿಗೆ ಸಾಕಷ್ಟು ಅನಾರೋಗ್ಯ ಇದ್ದ ಕಾರಣ 1 ನೇ ವಾದಿಯು ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿರುವುದಿಲ್ಲ. ನನ್ನ ಮನೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಬೇಡ ಎಂದ ಕಾರಣಕ್ಕೆ ನಾನು 10 ನೇ ತರಗತಿ ನಂತರ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಹಸನಬಾದಿ ಗ್ರಾಮದಿಂದ ಚಿಕ್ಕೇರಿ ಹೊಸಳ್ಳಿ ಗ್ರಾಮ ಎಷ್ಟು ದೂರದಲ್ಲಿದೆ ಎಂದು ಗೊತ್ತಿಲ್ಲ. ಹಸನಬಾದಿ ಗ್ರಾಮದಿಂದ ಚಿಕ್ಕೇರಿ ಹೊಸಳ್ಳಿ ಗ್ರಾಮಕ್ಕೆ ಹೋಗಲು ಹಾನಗಲ್ಲಗೆ ಬಂದು ಹೋಗಬೇಕು ಎಂದರೆ ಗೊತ್ತಿಲ್ಲ. ನಾನು ಚಿಕ್ಕೇರಿ ಹೊಸಳ್ಳಿ ಗ್ರಾಮಕ್ಕೆ ಮೊದಲ ಬಾರಿಗೆ ಭೇಟಿ ನೀಡಿದಾಗ ನನಗೆ 8 ವರ್ಷ ವಯಸ್ಸು ಇರಬಹುದು. ತದನಂತರ ನಾನು ಚಿಕ್ಕೇರಿ ಹೊಸಳ್ಳಿ ಗ್ರಾಮಕ್ಕೆ ಎಂದಿಗೂ ಭೇಟಿ ನೀಡಿರುವುದಿಲ್ಲ.

3. ಶಂಕ್ರಪ್ಪ ತಂದೆ ಗಿರಿಯಪ್ಪ ಕೊಪ್ಪದ ನನಗೆ ಚಿಕ್ಕಪ್ಪ ಆಗಬೇಕು. ಮಹಾದೇವಪ್ಪ ರವರು ಸಹ ನನಗೆ ಚಿಕ್ಕಪ್ಪ ಆಗಬೇಕು. ಶಾಂತವ್ವ ಸುರಳೇಶ್ವರ ರವರು ನನ್ನ ತಂದೆಯ

ತಂಗಿ. ಈ ದಾವೆಯಲ್ಲಿ 2 ಮತ್ತು 4 ನೇ ಪ್ರತಿವಾದಿಯರನ್ನು ಯಾವ ಕಾರಣಕ್ಕೆ ಪಕ್ಷಕಾರರಾಗಿ ಸೇರಿಸಿದ್ದೇನೆ ಎಂದು ಗೊತ್ತಿಲ್ಲ. ತನ್ನ ಪರವಾಗಿಯೂ ಸಹ ಸಾಕ್ಷಿಯನ್ನು ನುಡಿಯುವಂತೆ 1 ನೇ ವಾದಿಯು ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ. 1 ನೇ ವಾದಿಯು ಖಾಯಂ ಆಗಿ ಉಡುಪಿಯಲ್ಲಿ ವಾಸವಾಗಿದ್ದಾರೆ. ಆಕೆಯು ಮದುವೆ ಆದ 10 ವರ್ಷಗಳವರೆಗೆ ಹಸನಬಾದಿಯಲ್ಲಿಯೇ ವಾಸ ಇದ್ದು, ನಂತರ ಆಕೆಯ ಗಂಡ ಉಡುಪಿಯಲ್ಲಿ ಕೆಲಸ ಮಾಡಲು ಹೋಗಿದ್ದರಿಂದ ಆಕೆಯು ಅಲ್ಲಿಯೇ ಗಂಡನೊಂದಿಗೆ ವಾಸವಿದ್ದಾಳೆ.

4. 1 ನೇ ವಾದಿಯ ಗಂಡನ ಖಾಯಂ ಗ್ರಾಮ ಹಸನಬಾದಿ. ನನ್ನ ಗಂಡ ಬೈಚುವಳ್ಳಿ ಗ್ರಾಮದವರು. ಈ ದಾವೆಯನ್ನು ಆಸ್ತಿಯಲ್ಲಿ ಹಕ್ಕನ್ನು ಕೋರಿ ಸಲ್ಲಿಸಿರುತ್ತೇನೆ. ಈ ದಾವೆಯನ್ನು ಸ ನಂಃ 62/1 ವಿಸ್ತೀರ್ಣ 2 ಎಕರೆ 33 ಗುಂಟೆ, ಸ ನಂಃ 52/ಬಿ ವಿಸ್ತೀರ್ಣ 3 ಎಕರೆ 24 ಗುಂಟೆ ಮತ್ತು ಸ ನಂಃ 25/1 ವಿಸ್ತೀರ್ಣ 11 ಗುಂಟೆ ಜಮೀನಿಗೆ ಸಲ್ಲಿಸಿದ್ದೇನೆ. ಸದರಿ ಜಮೀನುಗಳನ್ನು ಹೊರತುಪಡಿಸಿ ಇತರ ಆಸ್ತಿಯ ಮೇಲೆ ದಾವೆ ಸಲ್ಲಿಸಿರುವುದಿಲ್ಲ. ಗಿರಿಯಪ್ಪ ಕೊಪ್ಪದ ರವರು ನನ್ನ ಅಜ್ಜ. ನನ್ನ ಅಜ್ಜನ ವಂಶಸ್ಥರು ಮತ್ತು ಅವರ ಹೆಂಡತಿ ಮಕ್ಕಳುಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸ ನಂಃ 62/1 ಮತ್ತು 52/ಬಿ ಜಮೀನುಗಳು ಮೂಲತಃ ನನ್ನ ತಂದೆಯ ತಂದೆಯ ಹೆಸರಿನಲ್ಲಿ ಇದ್ದವು. ಸದರಿ ಜಮೀನುಗಳು ಗಿರಿಯಪ್ಪ ರವರಿಗೆ ಹೇಗೆ ಬಂದಿರುತ್ತವೆಂದು ಗೊತ್ತಿಲ್ಲ.

5. ನನ್ನ ತಾಯಿಯು ಹಸನಬಾದಿ ಗ್ರಾಮದವರು. ನನ್ನ ತಾಯಿಯ ತಾಯಿ ಮತ್ತು ಆಕೆಯ ಸಹೋದರ ಜೀವಂತ ಇದ್ದಾರೆ. ನನ್ನ ತಾಯಿಯ ಸಹೋದರನ ಹೆಸರು ಸುರೇಶ ಅರಳೇಶ್ವರ ನನ್ನ ತಾಯಿಯ ತಾಯಿ ಹೆಸರು ಕಮಲಮ್ಮ ಅರಳೇಶ್ವರ. ನನ್ನ ತಾಯಿ 1 ನೇ ಪ್ರತಿವಾದಿಯ ವಿರುದ್ದ ಜೀವನಾಂಶ ಕೋರಿ ಇದೇ ನ್ಯಾಯಾಲಯದಲ್ಲಿ ಕ್ರಿ ಮಿ ಸಂಃ 13/2002 ರ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. 4 ನೇ

ಪ್ರತಿವಾದಿಯು 1 ನೇ ಪ್ರತಿವಾದಿಯ ತಂಗಿ ಎಂದರೆ ಸರಿ. 4 ನೇ ಪ್ರತಿವಾದಿಯನ್ನು ನನ್ನ ಸೋದರ ಮಾವ ಸುರೇಶ ರವರಿಗೆ ಮದುವೆ ಮಾಡಲಾಗಿತ್ತು ಎಂದರೆ ಸಾಕ್ಷಿಯು ಆ ರೀತಿ ಮದುವೆ ಮಾಡಲಾಗಿತ್ತು ಎಂದು ನನಗೆ ನನ್ನ ತಾಯಿ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಪ್ರಸ್ತುತ ನನ್ನ ಸೋದರ ಮಾವನಿಗೆ ಶಂಕ್ರವ್ವ ಎಂಬ ಹೆಂಡತಿ ಇರುತ್ತಾಳೆ. ಶಂಕ್ರವ್ವ ರವರು ನನ್ನ ಸೋದರ ಮಾವನ ಸುರೇಶಪ್ಪನ 2 ನೇ ಹೆಂಡತಿ ಎಂದರೆ ಸರಿ. 4 ನೇ ಪ್ರತಿವಾದಿಯು ಸುರೇಶ ರವರ ವಿರುದ್ದ ಜೀವನಾಂಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದಳು ಎಂದರೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ